## ರಮಾನಾಥ್ ರಾಯ್

1940ರಲ್ಲಿ ಕೋಲ್ಕತ್ತಾದಲ್ಲಿ ಜನಿಸಿದ ರಮಾನಾಥ್ ರಾಯ್ ಬಂಗಾಳಿ ಲೇಖಕರು. ಇದುವರೆಗೆ ಇವರ 190 ಕಥೆಗಳು ಬಂಗಾಳಿಯ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇವರ 11 ಕಾದಂಬರಿಗಳ ಸಮಗ್ರ ಸಂಕಲನ ವಿಶಿಷ್ಟವಾಗಿದೆ. ಅನೇಕ ಭಾಷೆಗಳಿಗೆ ಅನುವಾದಗೊಂಡಿರುವ ಇವರ ಕಥೆ, ಕಾದಂಭರಿಗಳಲ್ಲಿ ಸಮಕಾಲೀನ ಸಮಸ್ಯೆಗಳ ದಟ್ಟ ಚಿತ್ರಣವಿರುತ್ತದೆ. ತಮ್ಮ ಹಾಸ್ಯ ಮಿಶ್ರಿತ ಕುಟುಕಿನೊಂದಿಗೆ ಬಂಗಾಳಿ ಸಾಹಿತ್ಯದಲ್ಲಿ ಮನೆಮಾತಾಗಿರುವ ರಮಾನಾಥ್ ರಾಯ್ ಅವರಿಗೆ ಪ್ರತಿಶೃತಿ ಪುರಸ್ಕಾರ, ಕೌಸ್ತುಭ ಪುರಸ್ಕಾರ ಮತ್ತು ಪ್ರತಿಷ್ಠಿತ ಬಂಕಿಮ್ ಚಂದ್ರ ಸ್ಮೃತಿ ಪುರಸ್ಕಾರಗಳು ಲಭಿಸಿವೆ.

ಕೂತಿರುವುದನ್ನು ನೋಡಿ ಕಳವಳಗೊಳ್ಳುತ್ತಾಳೆ. ಅವಳಿಗೆ ಮೊದಲು ಭಯವಾಗುತ್ತದೆ. ಏನಾಗಿಲ್ಲ ತಾನೇ? ಏನಾದರೂ ಆದರೆ ನನಗೆ ತುಂಬಾ ಕಷ್ಟವಾಗುತ್ತದೆ; ಆಗ ಈ ಮನೆಯ ಜವಾಬ್ದಾರಿಯನ್ನು ನೋಡಿಕೊಳ್ಳುವವರು ಯಾರು?

ಹೆಂಡತಿ ಸಮೀಪಕ್ಕೆ ಬಂದು ಕೇಳುತ್ತಾಳೆ, 'ನೀವಿಲ್ಲಿ ಹೀಗೇಕೆ ಕೂತಿದ್ದೀರ?'

ದಾಸ್ ಬಾಬೂ ಉತ್ತರಿಸುವುದಿಲ್ಲ.

'ಆರೋಗ್ಯ ಸರಿಯಿಲ್ವಾ?'

ದಾಸ್ ಬಾಬೂ ಉತ್ತರಿಸುವುದಿಲ್ಲ.

'ಪೇಟೆಯಿಂದ ಏನೇನು ತರಲು ಹೇಳಿತ್ತೋ, ಅವನ್ನೆಲ್ಲಾ ತಂದ್ರಾ?'

ದಾಸ್ ಬಾಬು ತಮ್ಮ ತಲೆಯಾಡಿಸಿ, 'ಹೂಂ' ಎನ್ನುತ್ತಾರೆ.

'ಬಾಸಮತಿ ಅಕ್ಕಿ, ಎಣ್ಣೆ, ಹಿಟ್ಟು, ಪಡುವಲ, ಬೆಂಡೆಕಾಯಿ, ಹಾಗಲಕಾಯಿ, ಮೆಣಸಿನಕಾಯಿ ಎಲ್ಲವನ್ನೂ ತಂದಿದ್ದೀರಲ್ವ?'

ದಾಸ್ ಬಾಬೂ ಹಿಂದಿನಂತೆಯೆ ತಲೆಯಾಡಿಸಿ, 'ಹೂಂ' ಎನ್ನುತ್ತಾರೆ.

'ದೊಡ್ಡ ಗಲದಾ ಮೀನು ತಂದ್ರಾ?'

ದಾಸ್ ಬಾಬೂ ಹಿಂದಿನಂತೆಯೇ ತಲೆಯಾಡಿಸಿ 'ಹೂಂ' ಎನ್ನುತ್ತಾರೆ.

ದಾಸ್ ಬಾಬೂ ಅವರ ಹೆಂಡತಿ ದೊಡ್ಡ ಚೀಲವನ್ನು ಎತ್ತಿಕೊಳ್ಳುತ್ತಾಳೆ; ಆಗ ಈ ಚೀಲ ತುಂಬಾ ಭಾರವಾಗಿದೆ, ಇದನ್ನು ಹೊತ್ತು ನಾನು ಒಳಗೆ ಹೋಗಲಾರೆ ಎಂದು ಯೋಚಿಸಿ ಮನೆಯ ಕೆಲಸದವಳನ್ನು ಕರೆಯುತ್ತಾಳೆ. ಅವಳಿಗೆ ಎರಡೂ ಚೀಲಗಳನ್ನು ಒಳಗೆ ಒಯ್ಯಲು ಆದೇಶಿಸುತ್ತಾಳೆ. ಕೆಲಸದಳು ಎರಡೂ ಚೀಲಗಳೊಂದಿಗೆ ಒಳಗೆ ಹೋಗುತ್ತಾಳೆ.

ಈಗ ಹೆಂಡತಿ ಕೇಳುತ್ತಾಳೆ, 'ಈಗಲೂ ನೀವಿಲ್ಲೇ ಇರ್ತೀರಾ? ಮನೆಯೊಳಗೆ ಬರಲ್ವಾ?'

ದಾಸ್ ಬಾಬೂ ಇಲ್ಲವೆಂಬಂತೆ ತಮ್ಮ ತಲೆಯನ್ನು ಆಡಿಸುತ್ತಾರೆ.

'ಹಾಗಾದ್ರೆ ಇಲ್ಲೇ ಕೂತಿರಿ' ಎನ್ನುತ್ತಾ ಅವರ ಹೆಂಡತಿ ಒಳಗೆ ಹೋಗುತ್ತಾಳೆ. ದಾಸ್ ಬಾಬೂ ಅಲ್ಲಿಯೇ ಗೋಡೆಗೆ ಒರಗಿ ಕೂರುತ್ತಾರೆ.

ಸಮಯ ಮೆಲ್ಲ-ಮೆಲ್ಲನೆ ಸರಿಯುತ್ತಿದೆ. ದಾಸ್ ಬಾಬೂ ಅವರ ಪಕ್ಕದಿಂದಲೇ ಮಗ ಕಚೇರಿಗೆ ಹೋಗುತ್ತಾನೆ. ಸೊಸೆ ಸಹ ಹಾಗೆಯೇ ಅವರ ಪಕ್ಕದಿಂದ ಕಚೇರಿಗೆ ಹೋಗುತ್ತಾಳೆ. ಮೊಮ್ಮಗ-ಮೊಮ್ಮಗಳು ಸಹ ಅವರ ಪಕ್ಕದಿಂದಲೇ ಶಾಲೆಗೆ ಹೋಗುತ್ತಾರೆ. ಅವರ ಹೆಂಡತಿ ಮನೆಯ ಅಡುಗೆ ಮನೆಯಲ್ಲಿ ಇನ್ನೂ ಕೆಲಸ ಮಾಡುತ್ತಿದ್ದಾಳೆ.

ಈಗ ದಾಸ್ ಬಾಬೂ ಅವರ ಆರೋಗ್ಯ ಮೊದಲಿಗಿಂತ ಹದಗೆಟ್ಟಿದೆ. ಈಗ ಕೂತಿರುವುದು ಸಹ ಕಷ್ಟವಾಗುತ್ತಿದೆ. ಅಲ್ಲಿಯೇ ಮಲಗುತ್ತಾರೆ. ಎದೆ ನೋವು ಮೊದಲಿಗಿಂತ ಹೆಚ್ಚಾಗಿದೆ. ನಾನಿನ್ನು ಬದುಕುವುದಿಲ್ಲ ಎಂದು ಅನ್ನಿಸುತ್ತದೆ. ಹೀಗೆ ಯೋಚಿಸುತ್ತಾ ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾರೆ.

ನೋಡು-ನೋಡುತ್ತಲೇ ದಾಸ್ ಬಾಬೂ ಅವರ ಸುತ್ತಮುತ್ತ ಗುಂಪು ಕಲೆಯುತ್ತದೆ. ಎಲ್ಲರೂ ಆ ಗಲ್ಲಿಯವರೇ ಆಗಿದ್ದಾರೆ. ದಾಸ್ ಬಾಬೂ ಅವರನ್ನು ನೋಡಿ ಜನ ಪರಸ್ಪರ ಹೀಗೆ ಮಾತನಾಡುತ್ತಿದ್ದಾರೆ-

'ದಾಸ್ ಬಾಬೂ ಅವರಿಗೆ ಏನಾಗಿದೆ?'

'ನನಗ್ಗೊತ್ತಿಲ್ಲ.'

'ಮನೇಲಿ ಜಗಳವೇನಾದರು ಆಯ್ತಾ?'

'ಆಗಿರಬಹುದು.'

'ಅದಕ್ಕೇ ಇಲ್ಲಿ ಮಲಗಿದ್ದಾರೆ.'